ಕ್ರಿಮಿನಲ್.ಮಿಸ್ಲೇನಿಯಸ್.ನಂ. 1444/2022

ಆರ್.ಡಬ್ಲ್ಯು.೧

**ಸಾಕ್ಷಿಯನ್ನು ಇಂದು ದಿನಾಂಕಃ 17.03.2025 ರಂದು ಕರೆದು ಪ್ರಮಾಣೀಕರಿಸಲಾಯಿತು**

**ಮುಂದುವರೆದ ಮುಖ್ಯ ವಿಚಾರಣೆ ಎದುರುದಾರ ಪರ ಶ್ರೀ ಎಸ್.ಎಸ್.ಸಿ. ವಕೀಲರಿಂದ**

ವಳಸಂಗ ಪೋಲಿಸ್ ಠಾಣೆ ಸೋಲಾಪುರ ರವರು ನೀಡಿರುವ ಮಾಹಿತಿ ಹಕ್ಕಿನ ಕೆಳಗಡೆ ನೀಡಿರುವ ಉತ್ತರವನ್ನು ಹಾಜರುಪಡಿಸಿದ್ದು ಅದನ್ನು ನಿ.ಆರ್.೧೪ ಎಂದು, ಅದರ ತರ್ಜುಮೆಯನ್ನು ನಿ.ಆರ್.೧೪(ಎ) ಎಂದು, ಅರ್ಜಿದಾರ ನಂ.೨ ರವರ ಜನನ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿ.ಆರ್.೧೫ ಎಂದು, ಎಸ್.ಬಿ.ಐ. ಬ್ಯಾಂಕಿನವರು ನೀಡಿರುವ ಸಾಲದ ಒಪ್ಪಂದ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ.ಆರ್.೧೬ ಎಂದು ಗುರುತಿಸಲಾಯಿತು.

ಪಾಟೀ ಸವಾಲು ಅರ್ಜಿದಾರ ಪರ ಶ್ರೀ ಬಿ.ಎ.ಡಿ. ವಕೀಲರಿಂದ

ನಾನು, ನನ್ನ ತಂದೆ ಮತ್ತು ನನ್ನ ಸಹೋದರರ ಪಾಲು ವಾಟ್ನಿ ಮಾಡಿಕೊಂಡು ಬೇರೆ ಬೇರೆ ಇರುತ್ತೇವೆ. ಸುಮಾರು ಒಂದು ವರ್ಷದ ಹಿಂದೆ ನನ್ನ ಮತ್ತು ನಮ್ಮ ತಂದೆ ನಡುವೆ ಪಾಲು ವಾಟ್ನಿ ಆಗಿರುತ್ತದೆ, ನನ್ನ ಸಹೋದರ ನನ್ನ ಮದುವೆ ಪೂರ್ವದಲ್ಲಿಯೇ ಬೇರೆ ಇರುತ್ತಾನೆ. ಅವರ ಮತ್ತು ನಮ್ಮ ನಡುವೆ ಪಾಲು ವಾಟ್ನಿ ಆಗಿರುವ ಕುರಿತು ಯಾವುದೇ ದಾಖಲಾತಿಗಳು ಇರುವುದಿಲ್ಲ, ಸಾಕ್ಷಿ ಮುಂದುವರೆದು ಪಹಣಿ ಪತ್ರಿಕೆಗಳು ಇರುತ್ತವೆ ಎಂಧು ನುಡಿಯುತ್ತಾರೆ. ನಾನು, ನನ್ನ ತಂದೆ ಮತ್ತು ನನ್ನ ಸಹೋದರ ಬೇರೆ ಬೇರೆ ಮನೆಯಲ್ಲಿ ವಾಸವಿರುತ್ತೇವೆ. ನಾನು ನಮ್ಮ ಹೊಲದಲ್ಲಿರುವ ಮನೆಯಲ್ಲಿರುತ್ತೇನೆ, ಸಾಕ್ಷಿ ಮುಂದುವರೆದು ನಮ್ಮ ತಂದೆ ಮತ್ತು ನಮ್ಮ ಸಹೋದರರಿಗೂ ಸಹ ಕೂಡ ಹೊಲದಲ್ಲಿ ಮನೆಯಿರುತ್ತದೆ. ನಮ್ಮ ತಾಯಿ ಜೀವಂತ ಇರುತ್ತಾರೆ, ಈಗ ನನ್ನ ತಂದೆ ಮತ್ತು ನನ್ನ ತಾಯಿ ಒಟ್ಟಿಗೆ ಇರುತ್ತಾರೆ. ಸೋಲಾಪುರದ ಕೌಟುಂಬಕ ನ್ಯಾಯಾಲಯದಲ್ಲಿ ಹಾಕಿರುವ ಅರ್ಜಿ ನಂ. 445/2022 ಇನ್ನೂ ನಿರ್ಧಾರ ಆಗಿರುವುದಿಲ್ಲ, ಪೆಂಡಿಂಗ್ ಇರುತ್ತದೆ. ಓ.ಎಸ್. ನಂ. 787/2022 ನಡೆಸದ ಕಾರಣ ಡಿಸ್ಮಿಸ್ ಆಗಿರುತ್ತದೆ, ಅದನ್ನು ರಿಸ್ಟೋರೇಶನ್ ಮಾಡಲು ಅರ್ಜಿ ಸಲ್ಲಿಸಿರುತ್ತಾರೆ, ಅದರಲ್ಲಿ ನಾನು ನನ್ನ ವಕೀಲರ ಮೂಲಕ ಹಾಜರಾಗಿ ತಕರಾರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ ಅಲ್ಲ.

ನನಗೆ ನಿ.ಆರ್.-೧೨ರ ಪ್ರಕಾರ 33714/- ಪೆನಶನ್ ಬರುತ್ತದೆ ಎಂದರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು 23364/- ಗಳು ಕೈಯಲ್ಲಿ ಬರುತ್ತವೆ ಎಂದು ನುಡಿಯುತ್ತಾರೆ, ಮೂರು ತಿಂಗಳಿನಿಂದ ನನಗೆ ಪೆನಶನ್ ಬಂದಿರುವುದಿಲ್ಲ. ಮೂರು ತಿಂಗಳಿನಿಂದ ಯಾಕೆ ಪೆನಶನ್ ಬಂದಿಲ್ಲ ಎಂದು ನೀವೇನಾದರೂ ಪತ್ರ ವ್ಯವಹಾರ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಪೆನಶನ್ ಇಂದಿಲ್ಲ ನಾಳೆ ಬರುತ್ತದೆ ಎಂದು ನಾನು ಪತ್ರ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ನನಗೆ ಸಮಯ ಸಿಕ್ಕಿಲ್ಲ ಎಂದು ನುಡಿಯುತ್ತಾರೆ. ಸದರಿ 10350/- ಯಾವ ಕಾರಣಕ್ಕಾಗಿ ಕಡಿಮೆ ಬರುತ್ತದೆ ಎಂದು ನಿಮಗೆ ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿಯು ನಮ್ಮ ಆರ್ಮಿ ರೂಲ್ಸ ಇರುತ್ತದೆ, ಅದಕ್ಕಾಗಿ ಕಟ್ ಮಾಡುತ್ತಾರೆ ಎಂದು ನುಡಿಯುತ್ತಾರೆ. ನೀವೇನಾದರೂ ನಿವೃತ್ತಿ ಹೊಂದುವುದಕ್ಕಿಂತ ಪೂರ್ವದಲ್ಲಿ ನಿಮ್ಮ ಇಲಾಖೆಯಲ್ಲಿ ಸಾಲವನ್ನೇನಾದರೂ ಪಡೆದಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ಸರಕಾರಕ್ಕೆ ಹಣವನ್ನು ಮರಳಿ ಪಾವತಿ ಮಾಡುವ ಕಾರಣಕ್ಕಾಗಿ ನಮ್ಮ ಇಲಾಖೆಯವರು 10350/- ಗಳನ್ನು ಮರುಪಾವತಿಸಿಕೊಳ್ಳುತ್ತಿದ್ದಾರೆ ಎಂದರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಸರಕಾರದ ಪಾಲಿಸಿಗನುಗುಣವಾಗಿ ಅದನ್ನು ರಿಕವರಿ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಇಂತಹ ಪಾಲಸಿ ಕಾರಣಕ್ಕಾಗಿ ಕಟ್ ಆಗುತ್ತಿದ್ದಾವೆ ಎಂದು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಸಲ್ಲಿಸಿಲ್ಲ ಎಂದರೆ ಸರಿ.

ನಾನು ನಿವೃತ್ತಿ ಹೊಂದಿದಾಗ ನನಗೆ ಎಷ್ಟು ಹಣ ಬಂದಿರುತ್ತದೆ ಎಂದು ನನಗೆ ನೆನಪಿಲ್ಲ. ಸದರಿ ಹಣ ನಮ್ಮ ಖಾತೆಗೆ ಜಮಾ ಆಗಿರುತ್ತದೆ ಎಂದರೆ ಸರಿ. ಸದರಿ ಖಾತೆಯು ಈಗಲೂ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ನಾನು 31-01-2016 ರಂದು ನಿವೃತ್ತಿ ಹೊಂದಿರುತ್ತೇನೆ. ನಾನು ನಿವೃತ್ತಿ ಹೊಂದಿದ 4-5 ತಿಂಗಳಿನಲ್ಲಿ ಹಣ ಜಮಾ ಆಗಿರುತ್ತದೆ. ನಾನು ನಿವೃತ್ತಿ ಹೊಂದಿದ ವರ್ಷ ಬ್ಯಾಂಕ್ ಖಾತೆಯ ಸ್ಟೇಟಮೆಂಟನ್ನು ಹಾಜರುಪಡಿಸಿಲ್ಲ ಎಂಧರೆ ಸರಿ,

ಸದರಿ ಸ್ಟೇಟಮೆಂಟನ್ನು ನ್ಯಾಯಾಲಯ ಕೇಳಿದರೆ ಹಾಜರುಪಡಿಸುವಿರಾ ಎಂದರೆ ಸಾಕ್ಷಿ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

ಅರ್ಜಿದಾರರು ಈ ಅರ್ಜಿಯನ್ನು ಸಲ್ಲಿಸುವ ಪೂರ್ವದಲ್ಲಿಯೇ ಸೋಲಾಪುರ ನ್ಯಾಯಾಲಯದಲ್ಲಿ ಓ.ಎಸ್.ನಂ. 445/2022 ನ್ನು ಸಲ್ಲಿಸಿದ್ದರು ಎಂದರೆ ಸರಿ. ಈ ದಾವೆಯನ್ನು ಹೂಡಿದ ಕಾರಣ ನಾನು ನನ್ನ ತಂದೆ ಜೊತೆ ಮಿಲಾಪಿಯಾಗಿ ನನ್ನ ಮಕ್ಕಳು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎಂದು ಹೇಳಿ ಹಿರಿಯ ನಾಗರೀಕ ನ್ಯಾಯಾಲಯದಲ್ಲಿ ನನ್ನ ತಂದೆ ಮೂಲಕ ನಾನೇ ಪಾಲು ವಾಟ್ನಿಯನ್ನು ಕ್ಯಾನ್ಸಲ್ ಮಾಡಿ ಎಂದು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ ಅಲ್ಲ. ಸದರಿ ಅರ್ಜಿಯನ್ನು ಸಹ ಕೂಡ ಈ ಅರ್ಜಿಯ ಅರ್ಜಿದಾರರ ಹಕ್ಕಿಗೆ ಚ್ಯುತಿ ಕೊಡಬೇಕೆನ್ನುವ ಉದ್ದೇಶದಿಂದ ಮಾನ್ಯ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿ ಅಲ್ಲ. ಸದರಿ ಹಿರಿಯ ನಾಗರೀಕ ನ್ಯಾಯಾಲಯದಲ್ಲಿ ಸಲ್ಲಿಸಿದ ಅರ್ಜಿಗೆ ನಮ್ಮದು ಯಾವುದೇ ತಕರಾರು ಇಲ್ಲ ಎಂದು ಹೇಳಿ ಬರೆದುಕೊಟ್ಟಿರುತ್ತೇವೆ ಎಂಧರೆ ಸರಿ, ಸಾಕ್ಷಿ ಮುಂದುವರೆದು ಮನೆಯಲ್ಲಿ ಜಗಳ ನಡೆದಿತ್ತು ಆದಕಾರಣದಿಂದ ಬರೆದುಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನನ್ನ ತಂದೆಯವರು ನಂತರ ಅವರ ಹೆಸರಿನಲ್ಲಿ ಜಮೀನು ಆದಕಾರಣದಿಂದ ನಮ್ಮ ಒಪ್ಪಿಗೆಯನ್ನು ಪಡೆದು ನನ್ನ ಸಹೋದರ ಮಲ್ಲಿಕಾರ್ಜುನನಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿ.13.08.2024 ರಂದು ನೊಂದಾಯಿತ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದತ್ತಾ ತಂದೆ ಹಾವಣ್ಣ ವಂಜಾರೆ ಮತ್ತು ಗುರುಶಾಂತಪ್ಪ ತಂದೆ ಸಂಗಪ್ಪ ಉಪಾಸೆ ರವರು ಇಂಗಳಿಗೆ ಗ್ರಾಮದವರು ಇರುತ್ತಾರೆ, ಇವರ ಪರಿಚಯ ನಿಮಗಿದೆಯಾ ಎಂದರೆ ಸಾಕ್ಷಿ ಇದೆ ಎಂದು ನುಡಿಯುತ್ತಾರೆ. ಅರ್ಜಿದಾರರ ಹಕ್ಕಿಗೆ ಚ್ಯುತಿ ಕೊಡಬೇಕೆನ್ನಿ ಉದ್ದೇಶದಿಂದ ನಮ್ಮ ತಂದೆ ಕಡೆಯಿಂದ ನಮ್ಮ ಸಹೋದರನಿಗೆ ಮಾರಾ ಟ ಮಾಡಿಸಿರುತ್ತೇವೆ ಎಂದರೆ ಸರಿ ಅಲ್ಲ.

ನಮ್ಮ ಜಮೀನು ಸ.ನಂ.99/2 ಇರುತ್ತದೆ. ಅದು 5 ಎಕರೆ ಜಮೀನು ಇರುತ್ತದೆ. ಸದರಿ ಜಮೀನಿನ ಮಾಲೀಕರು ಯಾರು ಇರುತ್ತಾರೆ ಎಂದರೆ ಸಾಕ್ಷಿ ನಮ್ಮ ತಂದೆ ಇರುತ್ತಾರೆ ಎಂದು ನುಡಿಯುತ್ತಾರೆ. ದಿ.30.06.2024 ರಂದು ನಾನು, ಅರ್ಜಿದಾರಳು ಅವರ ಸಹೋದರ, ವಳಸಂಗ ಠಾಣೆಯಲ್ಲಿದ್ದೆವು ಎಂದರೆ ಸರಿ ಅಲ್ಲ. ಸದರಿ ದಿನದಂದು ಅರ್ಜಿದಾರಳು ಪೋಲಿಸ್ ಠಾಣೆಯಲ್ಲಿ ಫಿರ್ಯಾದಿ ಸಲ್ಲಿಸಿರುತ್ತಾಳೆ, ಸದರಿ ಫಿರ್ಯಾದಿಗೆ ಅನುಸಾರವಾಗಿ ಪೋಲಿಸರು ನನ್ನನ್ನು ಠಾಣೆಗೆ ಕರೆಯಿಸಿ ಅರ್ಜಿದಾರ ನಂ.೨ ರವರ ಶಾಲಾ ವರ್ಗಾವಣೆ ಪ್ರಮಾಣ ಪತ್ರವನ್ನು ನನ್ನಿಂದ ಕೊಡಿಸಿಕೊಟ್ಟಿರುತ್ತಾರೆ ಎಂದರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ನಾನೇ ವರ್ಗಾವಣೆ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ, ಯಾವುದೇ ಪೋಲಿಸರ ಮೂಲಕ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಅರ್ಜಿದಾರಳು ನನ್ನ ಮೊದಲ ಹೆಂಡತಿ ಇರುತ್ತಾಳೆ ಎಂದರೆ ಸರಿ, ಅವಳ ಪಾಲನೆ ಪೋಷಣೆ ಮಾಡುವುದು ನನ್ನ ಜವಾಬ್ದಾರಿ ಇರುತ್ತದೆ ಎಂದರೆ ಸಾಕ್ಷಿ ನನ್ನ ಜೊತೆ ಇದ್ದರೆ ಮಾಡುತ್ತೇನೆ ಎಂದು ನುಡಿಯುತ್ತಾರೆ. ಈ ಅರ್ಜಿಯನ್ನು ಸಲ್ಲಿಸಿದಾಗಿನಿಂದಲೂ ಅರ್ಜಿದಾರಳು ತನ್ನ ತವರು ಮನೆಯಲ್ಲಿಯೇ ಇರುತ್ತಾಳೆ ಎಂಧರೆ ಸರಿ. ಈ ಅರ್ಜಿಯನ್ನು ಸಲ್ಲಿಸಿದಾಗಿನಿಂದಲೂ ನಾನು ಅರ್ಜಿದಾರರಿಗೆ ಜೀವನಾಂಶ ಕೊಟ್ಟಿರುವುದಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಅವರು ನನ್ನೊಂದಿಗೆ ಮಾತನಾಡುವುದಿಲ್ಲ ಆಕಾರಣಕ್ಕೆ ಕೊಟ್ಟಿರುವುದಿಲ್ಲ ಎಂದು ನುಡಿಯುತ್ಥಾರೆ. ಅರ್ಜಿದಾರ ನಂ.೨ ಯಾವ ಶಾಲೆಯಲ್ಲಿ ಕಲಿಯುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ, ಅವರ ಶಾಲೆಯ ಖರ್ಚನ್ನು ಈಗ ನೀಡುತ್ತಿಲ್ಲ

ಎಂದರೆ ಸದರಿ, ಸಾಕ್ಷಿಯು ನನ್ನ ಜೊತೆ ಇದ್ದಾಗ ನಾನೇ ಖರ್ಚು ಮಾಡಿ ವಿದ್ಯಾಭ್ಯಾಸ ಮಾಡಿಸಿರುತ್ತೇನೆ ಎಂದು ನುಡಿಯುತ್ತಾರೆ.

ಈ ಕೌಟುಂಬಿಕ ಜಗಳದ ಸಲುವಾಗಿ ಪಂಚಾಯತಿ ಆಗಿತ್ತಾ ಎಂದರೆ ಸಾಕ್ಷಿಯು ಆಗಿರುವುದಿಲ್ಲ, ನಾವು ಕರೆ ಮಾಡಿ ಹೇಳಿದರೂ ಬರಬೇಡಿರಿ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನಾನು ನನ್ನ ಮೊಬೈಲ್ ಸಂಖ್ಯೆ 9284072291 ರ ಮೂಲಕ 8296400122 ರ ಮೊಬೈಲಗೆ ಕರೆ ಮಾಡಿ ಹೇಳಿರುತ್ತೇನೆ. ಪಂಚಾಯತಿ ವತಿಯಿಂದ ಸಿಡಿಸಿದ್ದ ಕೋಟೆ ರವರು ಸಹ ಕೂಡ ಇದೇ ನಂಬರಿಗೆ ಕರೆ ಮಾಡಿ ನಾವು ಪಂಚಾಯತಿಗೆ ಬರುತ್ತೇವೆ ಎಂದು ಹೇಳಿರುತ್ತಾರೆ. ಊರಲ್ಲಿ ನಮ್ಮದು ಮನೆ ಇರುವುದಿಲ್ಲ, ಸಾಕ್ಷಿ ಮುಂದುವರೆದು ತೋಟದಲ್ಲಿ ಮನೆ ಇರುತ್ತದೆ ಎಂದು ನುಡಿಯುತ್ತಾರೆ.

[ ಈ ಹಂತದಲ್ಲಿ ಅರ್ಜಿದಾರ ಪರ ವಕೀಲರು ಮುಂದುವರೆದು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು ]

ಓ.ಹೇ.ಕೆ.ಸರಿ.ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ.ಸಿ.ಆಳಂದ.